ನೂರು ಸತ್ಯ. ಈ ಸಂಬಳಕ್ಕೆ ಬರುವವರು ಆ ಸಂಬಳಕ್ಕೋಸ್ಕರ ಅಲ್ಲಿ ಕೆಲಸ ಮಾಡುತ್ತಾರೆ, ಅಲ್ಲಿ ಕೆಲಸ ಮಾಡುವವರಿಗೆ ಅವರ ಬಗ್ಗೆ ಮಾನವೀಯತೆ , ಅಂತಃಕರುಣೆ ಇರಬೇಕು. ಅಂಥವರಿಗೆ ಏನಾದರೂ ಒಂದು ವ್ಯವಸ್ಥೆ ಮಾಡಿದರೆ ಅವರಿಗೆ ಒಳ್ಳೆಯದಾಗುತ್ತದೆ. ಹಾಗಾಗಿ ಆ ಲಕ್ಷ್ಮಿ ನಿಜಾಮುದ್ದೀನ್ ರವರ ಟ್ರಸ್ಟ್ ಅನ್ನು ನೋಡಿ ಎಂದು ಸಲಹೆ ಮಾಡುತ್ತೇನೆ.

ಶ್ರೀ ಹೆಚ್. ಕೆ. ಕುಮಾರಸ್ವಾಮಿ : ಮಾನ್ಯ ಸದಸ್ಯರುಗಳು ಸಲಹೆ ಕೊಟ್ಟ ಮೇರೆಗೆ ಈ ರೀತಿಯ ಶಾಲೆಗಳನ್ನು ನಡೆಸುತ್ತಿರುವವರು ಸರ್ಕಾರೇತರ ಸಂಸ್ಥೆಗಳೇ ಜಾಸ್ತಿ N.G.O ಗಳೇ ಜಾಸ್ತಿ. ಮಾನ್ಯ ಹಿರಿಯರಾದ ರಮೇಶ್ ಕುಮಾರ್ ಎಲ್ಲರೂ ಹೇಳಿದ ಹಾಗೆ ಬಹಳಷ್ಟು ಜನ ತಮ್ಮ ತನವನ್ನು ಧಾರೆಯೆರೆದು ಇಂಥವರೆನ್ನೆಲ್ಲಾ ಸಾಕಿ ಸಲುಹುವಂಥ ಕೆಸಲ ಮಾಡುತ್ತಿದ್ದಾರೆ. ಇಂಥ ಶಾಲೆಗಳನ್ನು ಹೆಚ್ಚಾಗಿ ಅವರೇ ನಡೆಸುತ್ತಿರುವುದರಿಂದ ಸರ್ಕಾರ ಹಿಂದೆ ಹೋಗುವುದಿಲ್ಲ. ಎಷ್ಟೇ ಜನ ಅಂಥ ಮಕ್ಕಳು ಬರಲಿ, ಸ್ವಯಂಸೇವಾ ಸಂಸ್ಥೆಗಳೂ ನಮ್ಮ ಹತ್ತಿರ ಬರಲಿ, ಅವರಿಗೆ ನಾವು ಪ್ರೋತ್ಸಾಹ ಕೊಡಲಿಕ್ಕೆ ಗಮನ ಕೊಡುತ್ತೇನೆ.

ಉಪಾಧ್ಯಕ್ಷರು : ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಉತ್ತರವನ್ನು ಕಾನೂನು ಸಚಿವರು ಮಂಡಿಸಿ.

ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು : ೨೧ ಮತ್ತು ೨೨ನೇ ಪಟ್ಟಿ

ಶ್ರೀ ಎಂ.ಪಿ. ಪ್ರಕಾರ್ಶ (ಗೃಹ ಮತ್ತು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ದಿನಾಂಕ ೨೯.೦೩.೨೦೦೭ ರಂದು ೨೧ನೇ ಪಟ್ಟಿಯು ಸದನದಲ್ಲಿ ಉತ್ತರಿಸುವ ೧೫ ಪ್ರಶ್ನೆಗಳ ಪೈಕಿ ೧೪ ಉತ್ತರಗಳನ್ನು ಮತ್ತು ಲಿಖಿತ ಮೂಲಕ ಉತ್ತರಿಸುವ ೫೯ ಪ್ರಶ್ನೆಗಳ ಪೈಕಿ ೫೦ ಉತ್ತರಗಳನ್ನು ಹಾಗು ದಿನಾಂಕ ೩೦.೦೩.೨೦೦೭ ರಂದು ೨೨ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ ೯೨ ಪ್ರಶ್ನೆಗಳ ಪೈಕಿ ೭೭ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

(ಅನುಬಂಧ –೬ ಮತ್ತು ಅನುಬಂಧ – ೭)

೨. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಚಾರಗಳು

ಅ) ಕಬ್ಬು ಬೆಳೆಗಾರರಿಗೆ ಸೂಕ್ತ ಬೆಲೆ ಇಲ್ಲದೇ ತೊಂದರೆಯಾಗುತ್ತಿರುವ ಬಗ್ಗೆ

ಶ್ರೀ ಜೆ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಇಡೀ ರಾಜ್ಯದಲ್ಲಿರತಕ್ಕಂಥ ಕಬ್ಬು ಬೆಳೆಗಾರರು ಕಬ್ಬಿಗೆ ಬೆಲೆ ಇಲ್ಲ, ರೈತರು ಸಂಪೂರ್ಣವಾಗಿ ದಿವಾಳಿಯಾಗುತ್ತಿದ್ದಾಖುಎ. ಅವರಿಗೆ ಇವತ್ತು ಸರ್ಕಾರ, ಸಕ್ಕರೆ ಕಾರ್ಖಾನೆ ಮಾಲೀಕರು ೧೧೦೦–೦೦ ರೂ.ಗಳು ಇದ್ದಂಥ ಟನ್ ಕಬ್ಬನ್ನು ಕೇವಲ ೬೦೦–೦೦ ಮತ್ತು ೭೦೦–೦೦ ರೂ.ಗಳಿಗೆ ಮಾರಾಟ ಮಾಡತಕ್ಕಂಥ ಸ್ಥಿತಿ ಬಂದಿದೆ, ಆ ಪರಿಸ್ಥಿತಿಯನ್ನು ಈ ಸಕ್ಕರೆ ಕಾರ್ಖಾನೆ ಮಾಲೀಕರು ನಿರ್ಮಾಣ ಮಾಡಿದ್ದಾರೆ. ಸರ್ಕಾರ ಇದರ ಮಧ್ಯೆ ಪ್ರವೇಶ ಮಾಡಬೇಕಾಗುತ್ತದೆ, ಏಕೆಂದರೆ ಒಟ್ಟು ೨.೦೦ ಲಕ್ಷ ಟನ್ ಕಬ್ಬು ಕರ್ನಾಟಕದಲ್ಲಿ ಬೆಳೆದಿದ್ದಾರೆ. ಈಗಾಗಲೇ ೧.೪೦ ಸಾವಿರ ಟನ್ ನಷ್ಟು ಕಬ್ಬನ್ನು ಅರೆದಿದ್ದಾರೆ. ಇನ್ನು ೬೦.೦೦ ಲಕ್ಷ ಟನ್ ಕಬ್ಬನ್ನು ಅರೆಯಬೇಕಾಗುತ್ತದೆ. ಈಗ ಸಕ್ಕರೆ ಕಾರ್ಖಾನೆ ಮಾಲೀಕರು ಏನು ಮಾಡಿದ್ದಾರೆ ೬೦೦, ೭೦೦–೦೦ ರೂ.ಗಳಿಗೆ ಖರೀದಿಸುವ ಸ್ಥಿತಿಗೆ ಬಂದು ಕೆಲವು ರೈತರು ಅದನ್ನು ಗದ್ದೆಯಲ್ಲಿಯೇ ಬಿಟ್ಟುಬಿಟ್ಟಿದ್ದಾರೆ, ಏಕೆಂದರೆ ಅದನ್ನು ಕಡಿದರೆ ಸಕ್ಕರೆ ಕಾರ್ಖಾನೆ ಮಾಲೀಕರು ಅದನ್ನು ತೆಗೆದುಕೊಳ್ಳುತ್ತಿಲ್ಲ, ರೈತರು ಅದನ್ನು ಕಡಿದು ಆಲೆಮನೆ ಮಾಡಲಿಕ್ಕೆ ಹೋದರೆ ಅದಕ್ಕೆ ಕೂಲಿ ಬರುವುದಿಲ್ಲ. ಹಾಗೇ ತೋಟದಲ್ಲಿ ಬಿಟ್ಟುಬಿಟ್ಟಿದ್ದಾರೆ. ತುಂಬಾ ಲೇಟಾದರೆ ಆ ಕಬ್ಬಿನಲ್ಲಿ ಸಕ್ಕರೆ ಅಂಶ ಕಡಿಮೆಯಾಗುತ್ತದೆ, ರಿಕವರಿ ಲೆಸ್ ಆಗಿ ಸಂಪೂರ್ಣವಾಗಿ ನಾಶವಾಗುತ್ತದೆ, ರೈತ ಸಂರ್ಪೂವಾಗಿ ದಿವಾಳಿಯಾಗುತ್ತಾನೆ. ಅದರ ಪ್ರಯುಕ್ತ ಮೈಸೂರು, ಮಂಡ್ಯ ಜಿಲ್ಲೆಗಳ ಕಡಿಯಿಂದ ನೂರಾರು ಜನ ರೈತರು ಬೆಲೆ ನಿರ್ಣಯ ಮಾಡಿ ಎಂದು ಧರಣಿ ಕುಳಿತಿದ್ದಾರೆ, ಅವರು ೧೩ ಬೇಡಿಕೆಗಳನ್ನು